4) ಹಾಸನ
5) ಗದಗ
6) ಉತ್ತರ ಕನ್ನಡ
7) ಬೆಂಗಳೂರು
8) ತುಮಕೂರು
9) ಗುಲ್ಬರ್ಗಾ
10) ಚಿತ್ರದುರ್ಗ
11) ಕೊಪ್ಪಳ
12) ಬಳ್ಳಾರಿ
13) ಚಿಕ್ಕಮಗಳೂರು

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : 1591ಕ್ಕೆ ಸಂಬಂಧಿಸಿದಂತೆ, ಅನುಬಂಧ-2

ವಿಜ್ಞಾನ ವಿಭಾಗದ ವಿಷಯಗಳಿಗೆ ಉಪನ್ಯಾಸಕರ ಕೊರತೆ ಇರುವ ಪಟ್ಟಿ

1) ಗಣಿತ - 09
2) ಕಂಪ್ಯೂಟರ್ ಸೈನ್ಸ್ - 18
3) ಹೋಂ ಸೈನ್ಸ - 03
4) ಭೌತಶಾಸ್ತ್ರ : ಎಲೆಕ್ಟ್ರಾನಿಕ್ - 38
5) ಫಿಶ್ ಅಂಡ್ ಫಿಶ್ ಇಂಡಸ್ಟ್ರೀಸ್- 01

ವಿಜ್ಞಾನ ವಿಭಾಗದ ವಿಷಯಗಳಿಗೆ ಖಾಲಿ ಇರುವ ಹುದ್ದೆಗಳು

1) ಎಲೆಕ್ಟ್ರಾನಿಕ್ಸ್ - 18
2) ಗಣಿತ - 08
3) ಕಂಪ್ಯೂಟರ್ ಸೈನ್ಸ್ - 15
4) ಹೋಂ ಸೈನ್ಸ್ - 03
5) ಬಯೋ ಕೆಮಿಸ್ಟ್ರಿ - 05
6) ಮೈಕ್ರೊ ಬಯಾಲಜಿ - 10
7) ಫಿಶ್ ಅಂಡ್ ಫಿಶ್ ಇಂಡಸ್ಟ್ರೀಸ್- 01
8) ಭೌತಶಾಸ್ತ್ರ - 08

ಕಿರಿಯ ಮಹಿಳಾ ಆರೋಗ್ಯ ಕಾರ್ಯಕರ್ತೆಯರ (ಎ.ಎನ್.ಎಂ.) ನೇಮಕಾತಿ

1160 (1419) ಶ್ರೀ ಅಪ್ಪಯ್ಯಗೌಡ ಬಸಗೌಡ ಪಾಟೀಲ (ಸಂಕೇಶ್ವರ್) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಖಾಲಿ ಇರುವ ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರ ಸಂಖ್ಯೆ ಎಷ್ಟು;

ಆ) ಬೆಳಗಾವಿ ಜಿಲ್ಲೆಯಲ್ಲಿ ಖಾಲಿ ಇರುವ ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರ ಸಂಖ್ಯೆ ಎಷ್ಟು?

ಇ) ಖಾಲಿ ಇರುವ ಕಿರಿಯ ಮಹಿಳಾ ಆರೋಗ್ಯ ಕಾರ್ಯಕರ್ತೆಯವರ ಹುದ್ದೆಗಳಲ್ಲಿ ಜನರಲ್ ನರ್ಸಿಂಗ್ ಕೋರ್ಸ್ ಆದ ಅಭ್ಯರ್ಥಿಗಳನ್ನು ನೇಮಕಾತಿ ಮಾಡುತ್ತಿರುವುದಕ್ಕೆ ಕಾರಣಗಳೇನು;

ಈ) ಶ್ರೀ ಜೆ.ಜೆ. ಸಹಕಾರಿ ಆಸ್ಪತ್ರೆ ಮತ್ತು ಸಂಶೋಧನಾ ಸಂಸ್ಥೆ ಘಟಪ್ರಭಾ ಇವರು ನಡೆಸುತ್ತಿರುವ ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರ ತರಬೇತಿ ಕೇಂದ್ರವು ಸರ್ಕಾರದಿಂದ ಮಾನ್ಯತೆ ಪಡೆದು ಆರೋಗ್ಯ ಇಲಾಖೆಯಿಂದಲೇ ಪರೀಕ್ಷೆ ಕೈಗೊಂಡು ಪ್ರಮಾಣ ಪತ್ರ ಪಡೆದ ಅಭ್ಯರ್ಥಿಗಳನ್ನು ಖಾಲಿ ಇರುವ ಜಾಗಗಳಿಗೆ ನೇಮಕಾತಿ ಮಾಡದಿರಲು ಕಾರಣವೇನು?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) 1067

ಆ) 80

ಇ) ತರಬೇತಿ ಹೊಂದಿದ ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರು ಲಭ್ಯವಿಲ್ಲದೇ ಇರುವುದರಿಂದ ಜನರಲ್ ನರ್ಸಿಂಗ್ ತರಬೇತಿ ಹೊಂದಿದ ಅಭ್ಯರ್ಥಿಗಳಿಂದ ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರ ಖಾಲಿ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲಾಗುತ್ತಿದೆ.

ಈ) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳ ಪ್ರಕಾರ ಸರ್ಕಾರಿ ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರ ತರಬೇತಿ ಶಾಲೆಯಲ್ಲಿ ತರಬೇತಿ ಮುಗಿಸಿರುವ ಅಭ್ಯರ್ಥಿಗಳು ಮಾತ್ರ ಕಿರಿಯ ಮಹಿಳಾ ಆರೋಗ್ಯ ಸಹಾಯಕಿ ಹುದ್ದೆಗೆ ನೇಮಕಾತಿಗೆ ಅರ್ಹರಾಗಿರುತ್ತಾರೆ.

ತೀರ್ಥಹಳ್ಳಿ ಮತ್ತು ಹೊಸನಗರ ತಾಲ್ಲೂಕುಗಳಲ್ಲಿ ವರ್ಗಾವಣೆ ಆದೇಶದಿಂದ ಶಾಲೆಗಳಿಗೆ ಆದ ತೊಂದರೆ

1162 (1587) ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತೀರ್ಥಹಳ್ಳಿ ಮತ್ತು ಹೊಸನಗರ ತಾಲ್ಲೂಕುಗಳಲ್ಲಿರುವ ಪ್ರಾಥಮಿಕ ಶಾಲೆಗಳ ಸಂಖ್ಯೆ ಎಷ್ಟು? ಇವುಗಳಿಗೆ ಮಂಜೂರಾಗಿರುವ ಶಿಕ್ಷಕರ ಹುದ್ದೆಗಳು ಎಷ್ಟು? ಈ ಎರಡು ತಾಲ್ಲೂಕುಗಳಲ್ಲಿ ಖಾಲಿ ಇರುವ ಶಿಕ್ಷಕರ ಸಂಖ್ಯೆ ಎಷ್ಟು? ಎಷ್ಟು ಸಮಯದಿಂದ ಖಾಲಿ ಇರುತ್ತದೆ (ಎರಡು ತಾಲ್ಲೂಕುಗಳ ಪ್ರತ್ಯೇಕ ವಿವರ ನೀಡುವುದು)

ಆ) ಈ ಎರಡು ತಾಲ್ಲೂಕುಗಳಲ್ಲಿರುವ ಶಿಕ್ಷಕರಲ್ಲಿ ಎಷ್ಟು ಶಿಕ್ಷಕರು ತಾಲ್ಲೂಕಿನಿಂದ ಹೊರಗೆ ಈ ಸಾಲಿನಲ್ಲಿ ವರ್ಗಾವಣೆಯಾಗಿದ್ದಾರೆ. ಇವುಗಳಲ್ಲಿ ಏಕ ಶಿಕ್ಷಕರ ಶಾಲೆಗಳೆಷ್ಟು? ಈ ಎರಡು ತಾಲ್ಲೂಕಿಗೆ ಹೊರ ತಾಲ್ಲೂಕಿನಿಂದ ವರ್ಗಾವಣೆಯಾಗಿ ಬಂದಿರುವ ಶಿಕ್ಷಕರ ಸಂಖ್ಯೆ ಎಷ್ಟು? (ಎರಡು ತಾಲ್ಲೂಕುಗಳ ಬಗ್ಗೆ ಪ್ರತ್ಯೇಕ ವಿವರ ನೀಡುವುದು)

ಇ) ಈ ಸಾಲಿನ ಶಿಕ್ಷಕರ ವರ್ಗಾವಣೆಯಿಂದ ಈ ಎರಡೂ ತಾಲ್ಲೂಕಿನ ಶಾಲೆಗಳಲ್ಲಿ ಬೋಧನೆಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದಕ್ಕೆ ಬದಲಿ ವ್ಯವಸ್ಥೆ ಏನು ಮಾಡಲಾಗಿದೆ?